# Traders ask FM to act on disease-causing notes

## IGIB found DNA footprints of harmful micro-organisms

Prakash Kumar

**NEW DELHI: A pan-India traders' body has urged Finance Minister Arun Jaitley to order "a larger investigation" to assess the possibilities of spread of diseases by currency notes, observing that various reports have indicated so.**

The Confederation of All India Traders (CAIT), in a letter to the finance minister on Sunday, noted that various scientific journals have been publishing "alarming facts" about the possibility of the spread of communicable diseases through currency notes "almost every year".

"It is regretted to note that sadly no congnizance has been taken (by the government) of this serious public health issue," the traders' body said.

The CAIT said that the trading community across the country is the largest user of currency notes. If the reports are valid, it's not only traders but consumers as well who are vulnerable to infections by currency notes.

"We request you to conduct a larger investigation to assess the possibility of diseases getting spread by currency notes and take preventive steps to protect people from the contamination of currency notes," the traders' body said.

In one of the studies, the Institute of Genomics and Integrative Biology (IGIB), a top-rated research institute under the Council of Scientific and Industrial Research (CSIR), found traces of DNA footprints of at least 78 disease-causing micro-organisms on currency notes.

> **PRAVEEN KHANDELWAL, CAIT NATIONAL GENERAL SECRETARY:** Interestingly, the notes collected from doctors were also infected. We trust that the issue will receive immediate attention of the finance minister

"Most of them were found to be fungi but there were also bacteria that can cause diseases like dysentery, tuberculosis and ulcers. The study implies that currency notes often act as carriers of these micro-organisms and can spread microbial diseases," the traders' body noted.

The CAIT also referred to another report published in the Journal of Current Microbiology and Applied Sciences in 2016 which stated that 86.4% of the 120 currency notes tested at the department of microbiology, Tirunelveli Medical Colege, Tamil Nadu, were contaminated with disease-causing pathogens such as Klebsiella Pneumoniae and E Coli.

For the purpose of the study, currency notes had been collected from a variety of sources including doctors, banks, local markets, butchers, students and housewives.

DH News Service

ವಿಜಯವಾಣಿ

# ವೈದ್ಯ ಸೀಟ್ ಧೋಖಾ

## 16 ಜನರಿಗೆ 2.95 ಕೋಟಿ ರೂ. ವಂಚನೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಪಾಲಕರೇ ಎಚ್ಚರ. ಪ್ರತಿಷ್ಠಿತ ಕಾಲೇಜುಗಳಲ್ಲಿ ನಿಮ್ಮ ಮಕ್ಕಳಿಗೆ ಮೆಡಿಕಲ್ ಅಥವಾ ಇಂಜಿನಿಯರಿಂಗ್ ಪ್ರವೇಶಕ್ಕೆ ಪ್ರಯತ್ನಿಸುತ್ತಿದ್ದರೆ ಈಗಲೇ ಎಚ್ಚೆತ್ತುಕೊಳ್ಳಿ. ಸೀಟ್‌ಗಾಗಿ ಚೀಟ್ ಮಾಡುವ ಖತರ್ನಾಕ್ ಗ್ಯಾಂಗ್ ಬೆಂಗಳೂರಿನಲ್ಲಿ ಸಕ್ರಿಯವಾಗಿದ್ದು ಮೂರೇ ದಿನದಲ್ಲಿ 16 ಜನರಿಗೆ ಟೋಪಿ ಹಾಕಿ 2.94 ಕೋಟಿ ರೂ. ವಂಚಿಸಿದೆ.



» ಹುಷಾರ್ ಬೆಂಗಳೂರಲ್ಲಿದೆ ಬೃಹತ್ ಜಾಲ

ಪ್ರತಿಷ್ಠಿತ ಸಂಸ್ಥೆಗಳಲ್ಲಿ ಪ್ರವೇಶಕ್ಕೆ ಪ್ರಯತ್ನಿಸುತ್ತಿರುವವರನ್ನೇ ಟಾರ್ಗೆಟ್ ಮಾಡುವ ಈ ಗ್ಯಾಂಗ್ ಪ್ರತಿ ವರ್ಷದಂತೆ ಈ ವರ್ಷವೂ ಕೈಚಳಕ ತೋರಿಸಲಾರಂಭಿಸಿದೆ. ಅ.29 ರಿಂದ 31ರವರೆಗೆ 4 ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಸೀಟ್ ವಂಚನೆಗೆ ಸಂಬಂಧಿಸಿದ 7 ಪ್ರಕರಣಗಳು ದಾಖಲಾಗಿವೆ. ಒಟ್ಟಾರೆ 16 ಮಂದಿ 2.94 ಕೋಟಿ ರೂ. ವಂಚನೆಗೆ ಒಳಗಾಗಿದ್ದಾರೆಂಬ ಮಾಹಿತಿ ವಿಜಯವಾಣಿಗೆ ಲಭ್ಯವಾಗಿದೆ. ಇದೇ ರೀತಿ ನಗರದ ವಿವಿಧ ಪೊಲೀಸ್ ಠಾಣೆಗಳಲ್ಲೂ ಪ್ರಕರಣಗಳು ದಾಖಲಾಗಿರುವ ಸಾಧ್ಯತೆ ಇದೆ. ಪುಟ 3

ಬೆಂಗಳೂರಿನಲ್ಲಿ ಸೀಟು ಕೊಡಿಸುವ ಸೋಗಿನಲ್ಲಿ ಲಕ್ಷಾಂತರ ರೂ. ವಂಚಿಸಲಾಗುತ್ತಿದೆ. ಆರೋಪಿಗಳ ಪತ್ತೆಗೆ ಬಲೆಬೀಸಿದ್ದು, ಪಾಲಕರು ಸಹ ಮೋಸಕ್ಕೆ ಒಳಗಾಗದಂತೆ ಎಚ್ಚರ ವಹಿಸಬೇಕು.

| **ದೇವರಾಜ್** ಡಿಸಿಪಿ, ಕೇಂದ್ರ ವಿಭಾಗ

### ಮೊಬೈಲ್‌ನಲ್ಲಿ ಬಲೆ...

ಸೀಟ್‌ಗಾಗಿ ಪ್ರಯತ್ನಿಸುತ್ತಿರುವವರ ಮೊಬೈಲ್ ನಂಬರ್ ಸಂಗ್ರಹಿಸುವ ವಂಚಕರು ಕಂಪನಿ ಹೆಸರಿನಲ್ಲಿ ಸಂದೇಶ ಕಳುಹಿಸುತ್ತಾರೆ. ದೇಶದ ವಿವಿಧ ವೈದ್ಯಕೀಯ, ಇಂಜಿನಿಯರಿಂಗ್ ಕಾಲೇಜುಗಳ ಜತೆ ನಾವು ಒಪ್ಪಂದ ಮಾಡಿಕೊಂಡಿದ್ದು, ನಿಮ್ಮ ಮಕ್ಕಳಿಗೆ ವೈದ್ಯಕೀಯ, ಇಂಜಿನಿಯರಿಂಗ್ ಅಥವಾ ಮತ್ತಾವುದೇ ಸೀಟ್ ಬೇಕಾದರೆ ಕರೆ ಮಾಡಿ ಎಂದು ಮನವಿ ಮಾಡುತ್ತಾರೆ. ಇದನ್ನು ನೋಡಿದವರು ಕರೆ ಮಾಡಿದರೆ ಕಚೇರಿಗೋ ಅಥವಾ ತಮ್ಮ ಜಾಲ ಸಕ್ರಿಯವಾಗಿರುವ ಕಡೆಗೋ ಆಹ್ವಾನ ನೀಡುತ್ತಾರೆ. ಕೊನೆಗೆ ಇವರು ಬಲೆಗೆ ಬಿದ್ದಿರುವುದು ಖಚಿತವಾದ ಬಳಿಕ ಮುಖಾಮುಖಿ ಭೇಟಿಯಾಗುತ್ತಾರೆ.

● 5 ವರ್ಷದ ಮೆಡಿಕಲ್ ಕೋರ್ಸ್ ಸೀಟ್ ಇಂತಿಷ್ಟು ಲಕ್ಷ ರೂ. ಆಗುತ್ತದೆ. ದಾಖಲಾತಿ ತುಂಬಲು 20 ಸಾವಿರ ರೂ. ಮೊದಲು ಶುಲ್ಕ ಪಾವತಿಸಿ ಆ ನಂತರ ಚೆಕ್ ಮೂಲಕ ನಮ್ಮ ಬ್ಯಾಂಕ್ ಖಾತೆಗೆ ಜಮೆ ಮಾಡಿ ಎಂದು ಹೇಳುತ್ತಾರೆ. ಹಣ ಜಮೆ ಮಾಡಿದ ಮೇಲೆ ಹಂತ ಹಂತವಾಗಿ ಲಕ್ಷಾಂತರ ರೂ. ವಸೂಲಿ ಮಾಡುತ್ತಾರೆ. ಕೊನೆಗೊಂದು ದಿನ ಮೊಬೈಲ್, ದೂರವಾಣಿ ಸ್ಥಗಿತ ಮಾಡುತ್ತಾರೆ.

# ವೈದ್ಯ ಸೀಟ್ ಧೋಖಾ

ಮೊದಲ ಪುಟದಿಂದ...

ಹೊರರಾಜ್ಯದವರೇ ಟಾರ್ಗೆಟ್ : ದೇಶದಲ್ಲೇ ಪ್ರತಿಷ್ಠಿತ ಕಾಲೇಜು, ಉತ್ತಮ ವಾತಾವರಣ ಹೊಂದಿರುವ ಬೆಂಗಳೂರಿನಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಬೇಕೆಂಬ ಆಸೆಯಿಂದ ಹೊರರಾಜ್ಯದ ತಂದೆ-ತಾಯಿ ಆನ್‌ಲೈನ್‌ನಲ್ಲಿ ಹುಡುಕಾಟ ನಡೆಸುತ್ತಾರೆ. ಇಂಥವರನ್ನೇ ಟಾರ್ಗೆಟ್ ಮಾಡುವ ವಂಚಕರು ಮೊಬೈಲ್ ಅಥವಾ ಇಮೇಲ್‌ಗೆ ಸಂದೇಶ ಕಳುಹಿಸಿ ಬಲೆಬೀಸುತ್ತಾರೆ. ಎಲ್ಲವನ್ನೂ ಕೂತಲ್ಲೇ ನಿರ್ವಹಿಸುವ ಇವರು ಪಾಲಕರ ಜತೆ ನಯವಾಗಿ ಮಾತನಾಡಿ ಬಲೆಗೆ ಬೀಳಿಸಿಕೊಂಡು ಬೆಂಗಳೂರಿನ ಪಂಚತಾರಾ ಹೋಟೆಲ್‌ಗೆ ಕರೆಸಿಕೊಳ್ಳುತ್ತಾರೆ. ಆ ನಂತರ ತಮ್ಮ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡಿಸಿಕೊಂಡು ವಂಚಿಸುತ್ತಾರೆ. ಇದಕ್ಕೆ ಉದಾಹರಣೆಯೆಂಬಂತೆ ವಂಚನೆಗೆ ಒಳಗಾದವರು ಪಂಜಾಬ್, ತೆಲಂಗಾಣ, ಗುಜರಾತ್, ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ಮತ್ತು ಜಾರ್ಖಂಡ್ ನಿವಾಸಿಗಳಾಗಿದ್ದಾರೆ.

**ಆ.29 ರಿಂದ 31ರವರೆಗೆ 4 ಠಾಣೆಗಳಲ್ಲಿ ದಾಖಲಾದ ವಂಚನೆ ಕೇಸುಗಳು**

| ಪ್ರಕರಣ | ವಂಚಕರು | ನೊಂದವರು | ವಂಚನೆ ವಿಧಾನ | ರೂ. (ಲಕ್ಷಗಳಲ್ಲಿ) |
|---|---|---|---|---|
| 1 | 4 | 1 | ಆನ್‌ಲೈನ್ | 5 |
| 2 | 3 | 2 | ಎಸ್‌ಎಂಎಸ್ | 49.30 |
| 3 | 5 | 7 | ಎಸ್‌ಎಂಎಸ್ | 1.35 (ಕೋಟಿ) |
| 4 | 4 | 1 | ಮೊಬೈಲ್ ಕರೆ | 11.65 |
| 5 | 2 | 1 | ಮೊಬೈಲ್ ಕರೆ | 9.20 |
| 6 | 2 | 1 | ಜಾಹೀರಾತು | 25 |
| 7 | 3 | 3 | ಎಸ್‌ಎಂಎಸ್ | 59 |
| 7 | 23 | 16 | | 2.94 ಕೋಟಿ ರೂ. |

## ವಿದೇಶಕ್ಕೆ ಕಳುಹಿಸಿದ್ದರು!

ಮಹಾಲಕ್ಷ್ಮಿ ಲೇಔಟ್ ನಿವಾಸಿಯೊಬ್ಬರು ತಮ್ಮ ಮಗಳಿಗೆ ಮೆಡಿಕಲ್ ಸೀಟ್ ಕೊಡಿಸಲು ಜಾಹೀರಾತಲ್ಲಿ ಸಿಕ್ಕ 'ಅಮೆರಿಕನ್ ಯುನಿವರ್ಸಿಟಿ' ಎಂಬ ಸಂಸ್ಥೆಗೆ ಕರೆ ಮಾಡಿದ್ದರು. ನಿರ್ದೇಶಕ ಗೋಪಿನಾಥ್ ವೆಂಕಟ್ ಮತ್ತು ಆಡಳಿತ ವಿಭಾಗದ ಸುಮನ್ ಮಾತನಾಡಿ ಅಮೆರಿಕ ವಿವಿ ಜತೆ ಒಪ್ಪಂದ ಮಾಡಿಕೊಂಡಿದ್ದೇವೆ. ವಾಷಿಂಗ್ಟನ್ ಯುನಿವರ್ಸಿಟಿ ಆಫ್ ಬರ್ಮುಡಸ್ ಕಾಲೇಜಿನಲ್ಲಿ ಸೀಟ್ ಕೊಡಿಸುತ್ತೇವೆ ಎಂದು ಹೇಳಿ ಆರ್‌ಟಿಜಿಎಸ್‌ನಲ್ಲಿ 25 ಲಕ್ಷ ರೂ. ಪಡೆದಿದ್ದರು. ಆ ನಂತರ ವಿದ್ಯಾರ್ಥಿನಿಯನ್ನು ಆಕೆಯ ದುಡ್ಡಿನಲ್ಲೇ ಬರ್ಮುಡಾಗೆ ಕಳುಹಿಸಿದ್ದರು. ಆಕೆ ಅಲ್ಲಿಗೆ ಹೋಗಿ ವಿಚಾರಿಸಿದಾಗ ಅಂತಹ ವಿವಿಯೇ ಇಲ್ಲ ಎಂಬುದು ಗೊತ್ತಾಗಿ ಹಿಂದಿರುಗಿದ್ದರು. ಆಡುಗೋಡಿಯಲ್ಲಿದ್ದ ಸಂಸ್ಥೆಗೆ ಹೋಗಿ ವಿಚಾರಿಸಿದಾಗ ಸಬೂಬು ಹೇಳಿ 5 ಲಕ್ಷ ರೂ.ಗೆ ಚೆಕ್ ಕೊಟ್ಟು ತಲೆಮರೆಸಿಕೊಂಡಿದ್ದಾರೆ.

## ಖಾತೆಗಳ ಶೋಧ

ವಿದ್ಯಾರ್ಥಿಗಳ ಪಾಲಕರ ಜತೆ ಮೊಬೈಲ್‌ನಲ್ಲೇ ವ್ಯವಹಾರ ಮುಗಿಸುವ ವಂಚಕರು ಕೊನೆಗೆ ಲಕ್ಷಾಂತರ ರೂ.ಗಳನ್ನು ಚೆಕ್, ಡಿಡಿ ಅಥವಾ ಆರ್‌ಟಿಜಿಎಸ್ ಮೂಲಕ ಜಮಾ ಮಾಡಿಕೊಂಡಿದ್ದಾರೆ. ತನಿಖೆ ಕೈಗೊಂಡಿರುವ ಪೊಲೀಸರು ಬ್ಯಾಂಕ್ ಖಾತೆಯನ್ನು ಜಾಲಾಡುತ್ತಿದ್ದಾರೆ.